೨೦೦೨-೦೩	–	–	–
೨೦೦೩-೦೪	–	–	–
೨೦೦೪-೦೫	–	–	–
ಒಟ್ಟು	೧.೨೫	೧.೨೫	–

ಇ) ರಾಜ್ಯ ಸರ್ಕಾರದ ಮಾರುಕಟ್ಟೆ ಮೂಲಭೂತ ಯೋಜನೆಯಡಿಯಲ್ಲಿ ಯಾವುದೇ ಕಾಮಗಾರಿಯನ್ನು ಕೈಗೊಂಡಿರುವುದಿಲ್ಲ.

ಈ) ಅನ್ವಯಿಸುವುದಿಲ್ಲ.

ಶ್ರೀಮತಿ ಜಯಮಾಲ (ಜಯಮಾಲ) ಶ್ರೀ ಅನಿಲ್ ಹೆಚ್. ಲಾಡ್ (ಕೂಡ್ಲಿಗಿ) :- ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೂಡ್ಲಿಗಿ ವಿಧಾನ ಸಭಾ ಕ್ಷೇತ್ರದಲ್ಲಿಯ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ೩೭೮೮ ಹೆಕ್ಟೇರ್ ಪ್ರವೇಶದಲ್ಲಿ ತೋಟಗಾರಿಕಾ ಬೆಳೆಗಳನ್ನು ಬೆಳೆಯಲಾಗುತ್ತಿದ್ದು ಹನಿ ನೀರಾವರಿ ಯೋಜನೆಗೆ ಶೇಕಡ ೫೦ರಷ್ಟು ಸಬ್ಸಿಡಿ ನೀಡುವ ಯೋಜನೆಯಿದೆಯೇ;

ಆ) ಹಾಗಿದ್ದಲ್ಲಿ, ಯಾವಾಗ ನೀಡಲಾಗುವುದು;

ಇ) ಪ್ರಸ್ತುತ ಐದು ಎಕರೆ ಪ್ರದೇಶಕ್ಕೆ ನೀಡಲಾಗುತ್ತಿದ್ದ ಸಬ್ಸಿಡಿಯನ್ನು ೧೦ ಎಕರೆ ಪ್ರದೇಶಕ್ಕೆ ನೀಡುವಂತೆ ವಿಸ್ತರಿಸಲಾಗುವುದೇ;

ಈ) ಬಿಜಾಪುರ ಹಾಗೂ ಕೋಲಾರ ಜಿಲ್ಲೆಗಳಿಗೆ ಶೇಕಡ ೧೦೦ ರಷ್ಟು ಸಬ್ಸಿಡಿಯನ್ನು ನೀಡುವಂತೆ, ಹಗರಿ ಬೊಮ್ಮನಹಳ್ಳಿಗೂ ನೀಡಲಾಗುವುದೇ?

ಶ್ರೀ ಆರ್. ಶ್ರೀನಿವಾಸ್ (ತೋಟಗಾರಿಕೆ ಸಚಿವರು) :

ಅ) ಹೌದು, ಯೋಜನೆಯು ಈಗಾಗಲೇ ಜಾರಿಯಲ್ಲಿರುತ್ತದೆ.

ಆ) ಯೋಜನೆಯು ಈಗಾಗಲೇ ಜಾರಿಯಲ್ಲಿರುತ್ತದೆ

ಇ) ಇಲ್ಲ.

ಈ) ಇಲ್ಲ.